**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2018-19** **ದಿನಾಂಕ: 09-01-2019**

# ಪತ್ರಿಕಾ ಆಮಂತ್ರಣ

1. ನ್ಯಾಯ ವಿಜ್ಞಾನ ಪ್ರಯೋಗಾಲಯಗಳ ನಿರ್ದೇಶನಾಲಯದ ಉದ್ಘಾಟನೆ ಸಮಾರಂಭ

**ಮುಖ್ಯ ಅತಿಥಿ:**
ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಗೌರವಾನ್ವಿತ ಅತಿಥಿಗಳು:**
ಡಾ. ಜಿ. ಪರಮೇಶ್ವರ, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಎಂ.ಬಿ. ಪಾಟೀಲ್, ಗೃಹ ಸಚಿವರು.
ಟಿ.ಎಮ್.ವಿಜಯ್ ಭಾಸ್ಕರ್, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು

ದಿನಾಂಕ: 10-01-2019, ಗುರುವಾರ, ಸಮಯ: ಬೆಳಿಗ್ಗೆ 10-00 ಗಂಟೆಗೆ.
ಸ್ಥಳ: ನಿಮ್ಹಾನ್ಸ್ ಸಭಾಂಗಣ, ಹೊಸೂರು ಮುಖ್ಯರಸ್ತೆ, ಲಕ್ಕಸಂದ್ರ, ಹೊಂಬೇಗೌಡನಗರ ಬೆಂಗಳೂರು.

2. ಕರ್ನಾಟಕ ವಿಧಾನಸಭೆಯ ಅರ್ಜಿಗಳ ಸಮಿತಿಯ ಸಭೆ **ನಂತರ ಸಮಿತಿ ಸದಸ್ಯರೊಂದಿಗೆ ಸ್ಥಳ** ಪರಿವೀಕ್ಷಣೆ:

**ಅಧ್ಯಕ್ಷತೆ:**
ಎಂ. ಕೃಷ್ಣಾರೆಡ್ಡಿ, ವಿಧಾನಸಭೆಯ ಉಪ ಸಭಾಧ್ಯಕ್ಷರು ಹಾಗೂ ಸಮಿತಿಯ ಅಧ್ಯಕ್ಷರು.

ದಿನಾಂಕ: 10-01-2019 ಗುರುವಾರ, ಸಮಯ: ಬೆಳಿಗ್ಗೆ 11-00 ಗಂಟೆಗೆ.
ಸ್ಥಳ: ಕೊಠಡಿ ಸಂಖ್ಯೆ 135, ವಿಧಾನಸೌಧ, ಬೆಂಗಳೂರು.

3. ಬೀಚಿ ಪ್ರಕಾಶನದ “ರಾಜೀವ್ ಗಾಂಧಿ ಭೀಕರ ಹತ್ಯೆ”– ಮಾದರಿ ತನಿಖೆಯ ಸೂಕ್ಷ್ಮ ಮಜಲುಗಳು – ಪುಸ್ತಕ ಬಿಡುಗಡೆ .

ಪುಸ್ತಕ ಬಿಡುಗಡೆ:
ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಮುಖ್ಯ ಅತಿಥಿಗಳು:
ಎಂ. ವಿ. ರಾಜಶೇಖರನ್, ಮಾಜಿ ಕೇಂದ್ರ ಯೋಜನಾ ರಾಜ್ಯ ಸಚಿವರು
ಎಂ.ಬಿ. ಪಾಟೀಲ್, ಗೃಹ ಸಚಿವರು.
ಲೇಖಕರು:
ಡಿ.ಆರ್. ಕಾರ್ತಿಕೇಯನ್, ನಿವೃತ್ತ ನಿರ್ದೇಶಕರು, ಸಿ.ಬಿ.ಐ. ಮತ್ತು ಮಹಾ ನಿರ್ದೇಶಕರು ರಾಷ್ಟ್ರೀಯ ಮಾನ ಹಕ್ಕುಗಳ ಆಯೋಗ
ಡಾ. ಡಿ.ವಿ. ಗುರುಪ್ರಸಾದ್, ನಿವೃತ್ತ ಪೊಲೀಸ್ ಮಹಾ ನಿರ್ದೇಶಕರು

ದಿನಾಂಕ: 10–01–2018, ಗುರುವಾರ ಸಮಯ: ಸಂಜೆ 4–00 ಗಂಟೆಗೆ.
ಸ್ಥಳ: “ಕೃಷ್ಣಾ” ಮುಖ್ಯಮಂತ್ರಿಗಳ ಗೃಹ ಕಚೇರಿ, ಬೆಂಗಳೂರು.

**ಪತ್ರಿಕಾ ಪ್ರಕಟಣೆ**

**ಸಂಖ್ಯೆ: 38/38**

# ಚಲನಚಿತ್ರ ಪ್ರಶಸ್ತಿ/ಸಹಾಯದನ ಅರ್ಜಿ ಆಹ್ವಾನ

ಬೆಂಗಳೂರು, ಜನವರಿ 9, (ಕರ್ನಾಟಕ ವಾರ್ತೆ)

**2018 ನೇ ಕ್ಯಾಲೆಂಡರ್ ವರ್ಷದ ಕನ್ನಡ ಚಲನಚಿತ್ರ ರಂಗದ ಜೀವಮಾನ ಸಾಧನೆ ವಾರ್ಷಿಕ ಪ್ರಶಸ್ತಿಗಳಾದ “ಡಾ.ರಾಜ್‌ಕುಮಾರ್ ಪ್ರಶಸ್ತಿ“,“ಪುಟ್ಟಣ್ಣ ಕಣಗಾಲ್ ಪ್ರಶಸ್ತಿ” ಹಾಗೂ “ಡಾ.ವಿಷ್ಣುವರ್ಧನ್ ಪ್ರಶಸ್ತಿ“ಗೆ ಆಯ್ಕೆ ಮಾಡಲು ನಾಮನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ಸಂಘ ಸಂಸ್ಥೆಗಳು ,ಸಾರ್ವಜನಿಕರು ನಾಮನಿರ್ದೇಶನಗಳನ್ನು ಕಳುಹಿಸಬಹುದಾಗಿದೆ.**

**2018 ನೇ ಕ್ಯಾಲೆಂಡರ್ ವರ್ಷದಲ್ಲಿ ಅಂದರೆ ದಿನಾಂಕ 01-01-2018 ರಿಂದ 31-12-2018 ರ ಅವಧಿಯೊಳಗೆ ಸೆನ್ಸಾರ್ ಪ್ರಮಾಣಪತ್ರ ಪಡೆದಂತಹ (ರಿಮೇಕ್ ಮತ್ತು ಡಬ್ಬಿಂಗ್ ಆದ ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಲನಚಿತ್ರಗಳನ್ನು ಹೊರತುಪಡಿಸಿ) ಕನ್ನಡ ಹಾಗೂ ಕರ್ನಾಟಕದ ಇತರೆ ಪ್ರಾದೇಶಿಕ ಭಾಷೆ (ತುಳು, ಕೊಡವ, ಕೊಂಕಣಿ, ಬಂಜಾರ, ಬ್ಯಾರಿ ಭಾಷೆಗಳು) ಚಲನಚಿತ್ರಗಳಿಗೆ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಹಾಗೂ ಸಹಾಯಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**2018 ನೇ ಕ್ಯಾಲೆಂಡರ್ ವರ್ಷದಲ್ಲಿ ಅಂದರೆ ದಿನಾಂಕ 01-01-2018 ರಿಂದ 31-12-2018 ರ ಅವಧಿಯೊಳಗೆ ಸೆನ್ಸಾರ್ ಪ್ರಮಾಣಪತ್ರ ಪಡೆದಂತಹ ಕನ್ನಡ ಕಿರುಚಿತ್ರಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಿರುಚಿತ್ರಗಳ ಅವಧಿ ಗರಿಷ್ಟ 30 ನಿಮಿಷಗಳು.**

**2018 ನೇ ಕ್ಯಾಲೆಂಡರ್ ವರ್ಷದಲ್ಲಿ ಅಂದರೆ ಜನವರಿ 1 ರಿಂದ ಡಿಸೆಂಬರ್ 31 ರೊಳಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವ ಚಲನಚಿತ್ರೋದ್ಯಮಕ್ಕೆ ಸಂಬಂಧಿಸಿದ ಪುಸ್ತಕಗಳಿಗೆ 2018 ನೇ ಕ್ಯಾಲೆಂಡರ್ ವರ್ಷದ "ಕರ್ನಾಟಕ ರಾಜ್ಯ ಚಲನಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿ"ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**ರಾಜ್ಯ ಚಲನಚಿತ್ರ ಪ್ರಶಸ್ತಿ ಹಾಗೂ ಸಹಾಯಧನಕ್ಕಾಗಿ ಅರ್ಜಿಗಳನ್ನು ನೇರವಾಗಿ ಅಥವಾ ಆನ್‍ಲೈನ್ ಮೂಲಕವು (ವೆಬ್ ಸೈಟ್ ವಿಳಾಸ:** https://serviceonline.gov.in/karnataka/login.do?) **ಸಲ್ಲಿಸಬಹುದಾಗಿರುತ್ತದೆ.**

**ಅರ್ಜಿ ನಮೂನೆಗಳಿಗೆ , ಅರ್ಜಿ ಶುಲ್ಕ ಹಾಗೂ ಹೆಚ್ಚಿನ ಮಾಹಿತಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಂಟಿ ನಿರ್ದೇಶಕರು, ಚಲನಚಿತ್ರ ಶಾಖೆ (ದೂರವಾಣಿ ಸಂ. 080-22028107/22028096) ಅಥವಾ ವೆಬ್ ಸೈಟ್ ವಿಳಾಸ:** http://karnatakainformation.gov.in/Pages/Top%20Menu/Downloads.html **ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದಾಗಿದೆ.**

# "Operation Greens"

## ಟೊಮ್ಯಾಟೋ, ಈರುಳ್ಳಿ ಮತ್ತು ಆಲೂಗಡ್ಡೆ ಬೆಳೆಗಳ ಸಮಗ್ರ ಅಭಿವೃದ್ಧಿ ಹಾಗೂ ಮೌಲ್ಯವರ್ಧನೆಗಾಗಿ ಯೋಜನೆ

ಬೆಂಗಳೂರು, ಜನವರಿ 9, (ಕರ್ನಾಟಕ ವಾರ್ತೆ)

ಕೇಂದ್ರ ಸರ್ಕಾರದ "Oprtation Greens" ಟೊಮ್ಯಾಟೋ ಮತ್ತು ಈರುಳ್ಳಿ ಬೆಳೆಗಳ ಸಮಗ್ರ ಅಭಿವೃದ್ಧಿ ಹಾಗೂ ಮೌಲ್ಯವರ್ಧನೆಗಾಗಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಮಂತ್ರಾಲಯವು 2018-19 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಟೊಮ್ಯಾಟೋ, ಈರುಳ್ಳಿ ಹಾಗೂ ಆಲೂಗಡ್ಡೆ ತರಕಾರಿಗಳ ಹೊಸ ಮಹತ್ವಾಕಾಂಕ್ಷೆ ಯೋಜನೆಯನ್ನು ಘೋಷಿಸಿದ್ದು, ಅದರಂತೆ, Operational Guidelines ಅನ್ನು www.mofri@nic.in ನಲ್ಲಿ ಹೊರಡಿಸಿದ್ದು, ಯೋಜನೆಯ ಅನುಷ್ಠಾನವು 2 ವರ್ಷಗಳಾಗಿದ್ದು (2018-19 ಮತ್ತು 2019-20) NAFED ಸಂಸ್ಥೆಯು ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ಹಾಗೂ ಈರುಳ್ಳಿ ಬೆಳೆಗೆ ಗದಗ ಮತ್ತು ಧಾರವಾಡ ಜಿಲ್ಲೆಗಳನ್ನು – Cluster ಗಳಾಗಿ ಆಯ್ಕೆಯಾಗಿರುತ್ತದೆ. ಸದರಿ ಜಿಲ್ಲೆಗಳಿಂದ ಪ್ರಸ್ತಾವನೆಗಳನ್ನು FPOs/NGOs / Co-operatives / complains / self-help groups / universities/ food processes / supply chain operations / central of state entires / organization ಗಳು Online ನಲ್ಲಿ GOI ಗೆ ಸಲ್ಲಿಸುವುದು ಹಾಗೂ ಸಮಗ್ರ ಮೌಲ್ಯವರ್ಧನೆ ಅಭಿವೃದ್ಧಿಗಾಗಿ ಸಲ್ಲಿಸುವ ಪ್ರಸ್ತಾವನೆಗಳಿಗೆ ಅರ್ಹ ಯೋಜನಾ ವೆಚ್ಚಕ್ಕೆ ಶೇ 50 ರಂತೆ (ರೈತ ಉತ್ಪಾದನಾ ಸಂಸ್ಥೆಗಳಿಗೆ ಶೇ 70 ರಂತೆ) ಗರಿಷ್ಠ ರೂ 50.00 ಕೋಟಿಗಳವರೆಗೆ ಸಹಾಯಧನ ಪಡೆಯಬಹುದಾಗಿರುತ್ತದೆ.

ಸದರಿ ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಲಾಲ್‌ಬಾಗ್‌ನ ತೋಟಗಾರಿಕೆ ನಿರ್ದೇಶನಾಲಯದ ತೋಟಗಾರಿಕೆ ಜಂಟಿ ನಿರ್ದೇಶಕರು (ತರಕಾರಿಗಳು) ಅಥವಾ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಚಿಕ್ಕಬಳ್ಳಾಪುರ/ಕೋಲಾರ/ಗದಗ/ಧಾರವಾಡ ಮತ್ತು ಈ ಜಿಲ್ಲೆಗಳ ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ರವರುಗಳನ್ನು ಸಂಪರ್ಕಿಸಬಹುದಾಗಿದೆ ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 39/39**

ಜನವರಿ 28 ರಿಂದ ಫೆಬ್ರವರಿ 5 ರವರೆಗೆ

## ಯಲಹಂಕ ಪ್ರಾದೇಶಿಕ ಕಚೇರಿಯ ವಾಹನ್–1 ರಲ್ಲಿ ಎಲ್ಲಾ ಸೇವೆಗಳು ಸ್ಥಗಿತ

ಬೆಂಗಳೂರು, ಜನವರಿ 9, (ಕರ್ನಾಟಕ ವಾರ್ತೆ)

ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಇಲಾಖೆಯು ಎನ್.ಐ.ಸಿ. ರವರ ತಾಂತ್ರಿಕ ನೆರವಿನಿಂದ ಅಭಿವೃದ್ಧಿಗೊಳಿಸಿರುವ ವಾಹನ ನೋಂದಣಿ ಸೇವೆಗಳಿಗೆ ಸಂಬಂಧಿಸಿದ ಕೇಂದ್ರೀಕೃತ ಹಾಗೂ ವೆಬ್ ಆಧಾರಿತ ವಾಹನ್–4 ತಂತ್ರಾಂಶವನ್ನು ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಅನುಷ್ಠಾನಗೊಳಿಸುವ ಕಾರ್ಯ ಪ್ರಾರಂಭಿಸಲಾಗಿದೆ.

ಪ್ರಾದೇಶಿಕ ಸಾರಿಗೆ ಕಚೇರಿ, ಯಲಹಂಕದಲ್ಲಿ ಜನವರಿ 28 ರಿಂದ ಫೆಬ್ರವರಿ 5 ರವರೆಗೆ 9 ದಿನಗಳ ಕಾಲ ವಾಹನ್–1 ರಲ್ಲಿ ಎಲ್ಲಾ ಸೇವೆಗಳು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗುತ್ತಿದೆ. ಸಕಾರಣ ಸಾರ್ವಜನಿಕರ ಸೇವೆಗಳಲ್ಲಿ ವ್ಯತ್ಯಯ ಆಗಬಹುದಾದ್ದರಿಂದ ಅನಾನೂಕೂಲವನ್ನು ತಪ್ಪಿಸಲು ಸಾರ್ವಜನಿಕರು ತಮ್ಮ ವಾಹನಕ್ಕೆ ಸಂಬಂಧಿಸಿದ ವಾಹನಗಳ ಹೊಸ ನೋಂದಣಿ, ವಾಹನ ವರ್ಗಾವಣೆ, ವಿಳಾಸ ಬದಲಾವಣೆ, ಎಫ್.ಸಿ. ನೋಂದಣಿ ಪತ್ರ

ನವೀಕರಣ, ಎನ್.ಓ.ಸಿ. ವಾಹನ ಸಂಖ್ಯೆ ಮತು ನೋಂದಣಿ ಇತ್ಯಾದಿ ಕೆಲಸಗಳನ್ನು ದಿನಾಂಕ: 27–01–2019 ರ ಮುಂಚಿತವಾಗಿ ಪೂರ್ಣಗೊಳಿಸಿಕೊಳ್ಳುವಂತೆ ಸಾರ್ವಜನಿಕರಲ್ಲಿ ಕೋರಿದೆ. ಹಾಗಾಗಿ ಸಾರ್ವಜನಿರು ಈ ಸಮಯದಲ್ಲಿ ಉಂಟಾಗುವ ಅನಾನೂಕೂಲಕ್ಕಾಗಿ ಸಹಕರಿಸುವಂತೆ ಕೋರಿದೆ.

ದಿನಾಂಕ: 27–01–2019 ರ ನಂತರ ಕಚೇರಿಯಲ್ಲಿ ವಾಹನ್ –1 ತಂತ್ರಾಂಶಕ್ಕೆ ಸಂಬಂಧಿಸಿದ ಯಾವುದೇ ಸಾರ್ವಜನಿಕ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಹೊಸ ತಂತ್ರಾಂಶವನ್ನು ಅಳವಡಿಸಿದ ನಂತರ ಹಳೆ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಹಳೆಯ ಅರ್ಜಿಗಳ ಸೇವಾ ನಿರಾಕರಣೆಯ ಬಗ್ಗೆ ಪ್ರಾದೇಶಿಕ ಸಾರಿಗೆ ಕಚೇರಿಯು ಯಾವುದೇ ಜವಾಬ್ದಾರಿಯನ್ನು ಹೊಂದಿರುವುದಿಲ್ಲ ಎಂದು ಯಲಹಂಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಿಳಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರು ಈ ಹಿಂದೆ ಯಾವುದೇ ವಾಹನ್ –1 ಕ್ಕೆ ಸಂಬಂಧಿಸಿದ ಅರ್ಜಿಗಳು ಬಾಕಿ ಉಳಿದಿದ್ದರೆ ದಿನಾಂಕ: 27–01–2019 ರೊಳಗಾಗಿ ಪೂರ್ಣಗೊಳಿಸಿಕೊಳ್ಳಬೇಕಾಗಿ ಹಾಗೂ ಕಚೇರಿಯೊಂದಿಗೆ ಸಹಕರಿಸುವಂತೆ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

**ಸಂಖ್ಯೆ: 40/40**

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಜನವರಿ 9, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಪೌರಾಡಳಿತ ನಿರ್ದೇಶನಾಲಯದ ನಗರಸಭೆ/ಪುರಸಭೆಗಳಲ್ಲಿನ ಕಿರಿಯ ಅಭಿಯಂತರರು (ಸಿವಿಲ್) 34+23 (ಹೈ.ಕ.) ಹುದ್ದೆಗೆ ಜನವರಿ 5 ರಂದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲದಲ್ಲಿ http://kpsc.kar.nic.in ಪ್ರಕಟಿಸಲಾಗಿದೆ.

ಆಕ್ಷೇಪಣೆಗಳಿದ್ದಲ್ಲಿ ಆಕ್ಷೇಪಣೆಗಳನ್ನು ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಲಾದ ದಿನಾಂಕದಿಂದ 7 ದಿನಗಳೊಳಗಾಗಿ ಆಯೋಗದ ಕೇಂದ್ರ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

# ಜನವರಿ 19 ರಂದು
# ಬ್ಯಾಟರಾಯನಪುರದಲ್ಲಿ ಉದ್ಯೋಗ ಮೇಳ

ಬೆಂಗಳೂರು, ಜನವರಿ 9, (ಕರ್ನಾಟಕ ವಾರ್ತೆ)

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಖಾಸಗಿ ನಿಯೋಜಕರುಗಳ ಸಂಯುಕ್ತ ಆಶ್ರಯದಲ್ಲಿ "ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಉದ್ಯೋಗ ಮೇಳ" ವನ್ನು ಜನವರಿ 19 ರಂದು ಶನಿವಾರ ಬೆಳಿಗ್ಗೆ 10-00 ಗಂಟೆಯಿಂದ ಅಪರಾಹ್ನ 5-00 ಗಂಟೆಯವರೆಗೆ ದೇವ್-ಇನ್ -ಸ್ಕೂಲ್, ಕಾವೇರಿ ಕಾಲೇಜು ಪಕ್ಕ, ಕೊಡಿಗೇಹಳ್ಳಿ ಮುಖ್ಯ ರಸ್ತೆ, 60 ಅಡ್ಡರಸ್ತೆ, ಸಹಕಾರ ನಗರ, ಬೆಂಗಳೂರು – 560 092 ರಲ್ಲಿ "ಉದ್ಯೋಗ ಮೇಳ" ವನ್ನು ಹಮ್ಮಿಕೊಂಡಿದೆ.

ಈ ಉದ್ಯೋಗ ಮೇಳದಲ್ಲಿ ಖಾಸಗಿ ವಲಯದ 100ಕ್ಕೂ ಹೆಚ್ಚು ಹೆಸರಾಂತ ಸಂಸ್ಥೆಗಳು ಭಾಗವಹಿಸುತ್ತಿದ್ದು, ವಿವಿಧ ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳಿಗೆ ಸ್ಥಳದಲ್ಲೇ ನೇರವಾಗಿ ಆಯ್ಕೆ ಮಾಡಲಿದ್ದಾರೆ.

ಅಕ್ಷರಸ್ಥರು, ಅರ್ಧದಲ್ಲಿಯೇ ಶಾಲೆ ಬಿಟ್ಟವರು ಹಾಗೂ ಎಸ್.ಎಸ್.ಎಲ್.ಸಿ. ಫೇಲ್/ಎಸ್.ಎಸ್.ಎಲ್.ಸಿ. ಪಾಸ್, ಪಿ.ಯು.ಸಿ., ಐ.ಟಿ.ಐ. ಡಿಪ್ಲೊಮೋ (ಎಲ್ಲಾ ಟ್ರೇಡ್‌ಗಳು). ಪದವೀಧರರು ಹಾಗೂ ಸ್ನಾತಕೋತ್ತರ ಪದವಿ ಹೊಂದಿದವರಿಗೆ ಉದ್ಯೋಗ ಅವಕಾಶಗಳು ಲಭ್ಯವಿದೆ. ಉದ್ಯೋಗಾಂಕ್ಷಿಗಳು ತಮ್ಮ ವೈಯಕ್ತಿಕ (ಬಯೋಡಾಟಾ) ವಿವರಗಳೊಂದಿಗೆ "ಉದ್ಯೋಗ ಮೇಳ" ದಲ್ಲಿ ಭಾಗವಹಿಸಿ ಉದ್ಯೋಗ ದೊರೆಯುವ ಸದವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಕೋರಿದೆ.

ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ದೂರವಾಣಿ ಸಂಖ್ಯೆ 22261184 / 22374582 / 22268846 / 22259351 / 236266678 ಅಥವಾ ದೇವ್-ಇನ್ -ಸ್ಕೂಲ್,

ಕಾವೇರಿ ಕಾಲೇಜು ಪಕ್ಕ, ಕೊಡಿಗೆಹಳ್ಳಿ ಮುಖ್ಯ ರಸ್ತೆ, 60 ಅಡ್ಡರಸ್ತೆ, ಸಹಕಾರ ನಗರ, ಬೆಂಗಳೂರು – 560 092 ಈ ವಿಳಾಸದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 42/42**

## ಬೆಂಗಳೂರು ಜಲಮಂಡಳಿ: ಆನ್ –ಲೈನ್ ಅರ್ಜಿ ವೆಬ್ಸೈಟ್‌ನಲ್ಲಿ ಮಾಹಿತಿ ಲಭ್ಯ

**ಬೆಂಗಳೂರು, ಜನವರಿ 9 (ಕರ್ನಾಟಕ ವಾರ್ತೆ)**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಖಾಲಿ ಇರುವ ಮಿಕ್ಕುಳಿದ ವೃಂದ (Non- Hyderabad Karnataka) ಮತ್ತು ಸ್ಥಳೀಯ ವೃಂದದ (Hyderabad Karnataka) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು ಮಿಕ್ಕುಳಿದ ವೃಂದದ (Non- Hyderabad Karnataka) ನೇಮಕಾತಿ ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/23–32–2017/2019/2018–19 ದಿನಾಂಕ: 24.08.2018 ಮತ್ತು ಸ್ಥಳೀಯ ವೃಂದದ (Hyderabad Karnataka) £ೇಮಕಾತಿ ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/23–32–2017/2018/2018–19 ದಿನಾಂಕ: 24.08.2018ರಲ್ಲಿ ಅರ್ಹ ಅಭ್ಯರ್ಥಿಗಳಿಂದ ಆನ್–ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಮುಂದುವರೆದು, **ಬೆಂಗಳೂರು ಜಲಮಂಡಳಿಯಲ್ಲಿ ಆನ್ –ಲೈನ ಮುಖಾಂತರ ಅರ್ಜಿ ಸಲ್ಲಿಸಿ ಅರ್ಜಿ ಸಂಖ್ಯೆ ಕಳೆದುಕೊಂಡಿರುವ ಅಭ್ಯರ್ಥಿಗಳು ಅರ್ಜಿಗಳು, ಅರ್ಜಿ ಸಂಖ್ಯೆಯನ್ನು ಪಡೆಯಲು ಮಂಡಳಿಯ ಅಧಿಕೃತ** ವೆಬ್ಸೈಟ್ www.bwssb.gov.in ನಲ್ಲಿ ಲಾಗಿನ ಆಗುವುದರ ಮೂಲಕ ಪಡೆಯಬಹುದಾಗಿರುತ್ತದೆ.

**ಸಂಖ್ಯೆ: 43/43**

## ಪ್ರಥಮ ಸೆಮಿಸ್ಟರ್ ಪರೀಕ್ಷೆಗಳು ಜನವರಿ 23 ರಿಂದ ಪ್ರಾರಂಭ

**ಬೆಂಗಳೂರು, ಜನವರಿ 9 (ಕರ್ನಾಟಕ ವಾರ್ತೆ)**

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳ (ಎಂ.ಎ/ಎಂ.ಕಾಂ/ಎಂ.ಎಸ್ಸಿ/ಎಂ.ಎಸ್.ಡಬ್ಲ್ಯೂ/ಎಂ.ಟಿ.ಟಿ.ಎಂ/ಎಂ.ಎಲ್.ಐ.ಎಸ್ಸಿ) ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ 23–01–2019 ರಿಂದ ಪ್ರಾರಂಭಗೊಳ್ಳುತ್ತವೆ. ಹೆಚ್ಚಿನ ವಿವರಗಳಿಗೆ www.bnu.ac.in. ನ್ನು ಸಂಪರ್ಕಿಸಬಹುದಾಗಿದೆ ಎಂದು ಕುಲಸಚಿವರು(ಮೌಲ್ಯಮಾಪನ)ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 44/44**

# Operation Greens

Bengaluru, January 9 (Karnataka Information)

Government of India-MoFPI (ministry of Food Processing Industries) has launched a new central sector scheme “Operation Greens- A scheme for integrated development of Tomato and Onion value chain’. Operational guidelines for this scheme has been finalized and uploaded on the website of the ministry http://mofpi.nic.in on 5th November 2018. In Karnataka, kharif production clusters such has Kolar and Chikkaballapura for tomato and Gadag and Dharwad for Onion have been selected by Government. For this, many stakesholders/Project Implementing Agencies like State Agriculture and other Marketing Federations, Farmers Producer Organizations (FPO) co-operatives, companies. Self helf groups, food processors, logistic operators, service providers, supply chairn operations, retail and wholesale chain operators, retails and wholesale chains and central and state governments and their entitis/organizations can submit the proposal online regarding the details of their proper production planning and creation of farm gate infrastructure which may strengthen the value chain by creating firm linkages with production clusters. Pattern of assistance of 50% (70% for FPO’s) of eligible cost maximum of 50 crore for Integrated value chain development project and assistance of 50% of eligible cost maximum of 25 rore for creation large scale storage and logistic infrastructure near major consumption centres. Further details, contact Joint Director of Horticulture (Vegetables) Directorate of Horticulture, Lalbagh Deputy Director of Horticulture (Z.P.) Chikkaballapura, Kolar, Gadag, Dhar3wad and senior Assistant Director of Horticulture at taluk levels says official press release.